# ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ

(ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆಯ ಅಂಗಸಂಸ್ಥೆ)

## ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿ ವಿಭಾಗ

**ಪೊನ್ನಂಪೇಟೆ - 571216**

Email: srkseva@gmail.com, srksevaponnampet@gmail.com
Web: www.rkmponnampet.org

ನಿಸರ್ಗ ಚಿಕಿತ್ಸೆ ಆಧುನಿಕ ಮಾನವನಿಗೆ ಅತ್ಯಂತ ಆವಶ್ಯಕವಿರುವ ಚಿಕಿತ್ಸಾಪದ್ಧತಿ. ರೋಗಿಯನ್ನು ದೇಹವೆಂದು ಪರಿಗಣಿಸದೆ, ಸಮಗ್ರವಾಗಿ ಪರಿಗಣಿಸಿ ಚಿಕಿತ್ಸೆ ನೀಡಿ, ನಂತರ ರೋಗ ಮರುಕಳಿಸದಂತೆ ಮಾರ್ಗದರ್ಶನ ನೀಡುವುದೇ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಚಿಕಿತ್ಸೆಗಳ ಗುರಿ. ಪ್ರಕೃತಿ ಚಿಕಿತ್ಸೆಯು ಕಾಯಿಲೆಗಳನ್ನು ಗುಣಪಡಿಸುತ್ತದೆ; ಯೋಗವು ಆರೋಗ್ಯವನ್ನು ಕಾಯ್ದುಕೊಂಡು ಹೋಗಲು ಸಹಕರಿಸುತ್ತದೆ.

ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ , ಪೊನ್ನಂಪೇಟೆಯಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಭಾಗವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಯೋಗ ಚಿಕಿತ್ಸೆ, ಜಲ ಚಿಕಿತ್ಸೆ, ಫಿಸಿಯೋಥೆರಪಿ, ಆಕ್ಯುಪಂಕ್ಚರ್, ಮಸಾಜ್ ಚಿಕಿತ್ಸೆ, ಮಣ್ಣಿನ ಚಿಕಿತ್ಸೆಗಳ ಸೇವೆಗಳು ಲಭ್ಯವಿವೆ.

ಪೊನ್ನಂಪೇಟೆಯಲ್ಲಿ ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿಯ ಈ ಕೆಳಕಂಡ ಮೂರು ಶಿಬಿರಗಳನ್ನು ಆಯೋಜಿಸಲಾಗಿದೆ:

09.09.2016 ರಿಂದ 12.09.2016 ರ ವರೆಗೆ

22.09.2016 ರಿಂದ 25.09.2016 ರ ವರೆಗೆ

18.10.2016 ರಿಂದ 21.10.2016 ರ ವರೆಗೆ

ಶಿಬಿರದಲ್ಲಿ ಪಾಲ್ಗೊಳ್ಳಬಯಸುವ ಆಸಕ್ತರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9036106418, 08274-249555, 249040

ನೋಂದಣಿ ಶುಲ್ಕ : **500 ರೂಪಾಯಿಗಳು** *(ಚಿಕಿತ್ಸಾ ಶುಲ್ಕ ಪ್ರತ್ಯೇಕ)*

*RTGSಗಾಗಿ ಬ್ಯಾಂಕ್ ವಿವರಗಳು:*

Sri Ramakrishna Sharadashrama, Ponnampet. Corporation Bank, SB. A/c.no.003200101001813.
IFSC Code : CORP0000032 (ಪತ್ರ ಅಥವಾ ಇಮೇಲ್ ಮೂಲಕ ವಿವರಗಳನ್ನು ತಿಳಿಸಿರಿ.)

# ಶ್ರೀರಾಮಕೃಷ್ಣ ಶಾರದಾಶ್ರಮ

**ಪೊನ್ನಂಪೇಟೆ -571 216, ಕೊಡಗು ಜಿಲ್ಲೆ ಫೋನ್: 08274-249040**

**e-mail: srkseva@gmail.com, srksevaponnampet@gmail.com**
**Web: www.rkmponnampet.org**

## ಆಧ್ಯಾತ್ಮಿಕ ಶಿಬಿರ

**14-10-2016 ರಿಂದ 16-10-2016**

ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ 7ನೇ ವಾರ್ಷಿಕೋತ್ಸವದ ಪ್ರಯುಕ್ತ, **2016 ಅಕ್ಟೋಬರ್ 14 ರಿಂದ 16 ರವರೆಗೆ,** 3 ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಅಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಸ್ವಾಮಿ ಜಗದಾತ್ಮಾನಂದಜಿ, ರಾಘವೇಶಾನಂದಜಿ, ನಿತ್ಯಸ್ಥಾನಂದಜಿ, ಮುಕ್ತಿದಾನಂದಜಿ, ಜಿತಕಾಮಾನಂದಜಿ, ತತ್ತ್ವರೂಪಾನಂದಜಿ, ತ್ಯಾಗೀಶ್ವರಾನಂದಜಿ, ಮತ್ತಿತರರು ಈ ಶಿಬಿರದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ. ದಿನಾಂಕ **17**ರಂದು ಆಸಕ್ತ ಶಿಬಿರಾರ್ಥಿಗಳಿಗೆ **ತಲಕಾವೇರಿ - ಭಾಗಮಂಡಲ** ಯಾತ್ರೆಯನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಯೋಜಿತವಾಗಿವೆ.

**ನೋಂದಣಿ ಶುಲ್ಕ** : ***ವಸತಿ ರಹಿತ :*** **ರೂ. 600/-** ***ವಸತಿ ಸಹಿತ :*** **ರೂ. 1000/-**

**ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 7.10.2016**

(ಅರ್ಜಿಯಲ್ಲಿ ಹೆಸರು, ವಯಸ್ಸು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ನೀಡಬೇಕು. ನಿಗದಿತ ಅರ್ಜಿಯನ್ನು ಆಶ್ರಮದ ವೆಬ್‌ಸೈಟಿನಿಂದ ಕೂಡ ಪಡೆಯಬಹುದಾಗಿದೆ.)

ಭಕ್ತಾದಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.

*RTGSಗಾಗಿ ಬ್ಯಾಂಕ್ ವಿವರಗಳು:*

Sri Ramakrishna Sharadashrama, Ponnampet.
Corporation Bank, SB. A/c.no.003200101000053.
IFSC Code : CORP0000032 (ಪತ್ರ ಅಥವಾ ಇಮೇಲ್ ಮೂಲಕ ವಿವರಗಳನ್ನು ತಿಳಿಸಿರಿ.)

ಭಗವತ್ಸೇವೆಯಲ್ಲಿ ತಮ್ಮ,
**ಸ್ವಾಮಿ ಬೋಧಸ್ವರೂಪಾನಂದ**
ಅಧ್ಯಕ್ಷರು

# ಮಾತು-ಮೌನದ ನಡುವೆ

## ಅರಿವೆಂಬ ಅದ್ಭುತ

ಮನುಷ್ಯ ಅದೆಷ್ಟೇ ವಿಷಯಗಳತ್ತ ತನ್ನ ಗಮನ ಹರಿಸಲಿ, ಅದೆಷ್ಟೇ ಸಂಗತಿಗಳಲ್ಲಿ ಆಸಕ್ತಿಯಿಂದ ತೊಡಗಿಕೊಳ್ಳಲಿ, ಅವನಲ್ಲಿ ಒಂದು ಕ್ರಿಯೆ ಮಾತ್ರ ಅಗೋಚರವಾಗಿ ನಡೆಯುತ್ತಲೇ ಇರುತ್ತದೆ. ಹೃದಯ ಬಡಿತದಂತೆ, ರಕ್ತಪರಿಚಲನೆಯಂತೆ, ಉಸಿರಾಟದಂತೆ – ಅದೇ, ನಿರಂತರ ಅರಿವಿನ ಪ್ರಕ್ರಿಯೆ. ಹುಟ್ಟಿಧಾರಭ್ಯ ಕಣ್ಣು, ಕಿವಿ ತೆರೆದು ಜಗತ್ತನ್ನು ಅಚ್ಚರಿಯಿಂದ ನೋಡುವ ಶಿಶುವಿಗೆ, ಕ್ಷಣ ಕ್ಷಣವೂ ಅದೆಷ್ಟು ಹೊಸ ಹೊಸ ಸಂಗತಿಗಳು ಅನುಭವಕ್ಕೆ ಬರುತ್ತವೆ! ಅದೊಂದನ್ನೂ ಗಮನಿಸದೆ, ಪ್ರತಿಯೊಂದು ಅನುಭವವನ್ನೂ ತನ್ನೊಳಗೆ ಮಿಲನಗೊಳಿಸುವ ಅದರ ಮಿದುಳೆಂಬ ಯಂತ್ರವನ್ನು ಭಗವಂತ ಎಷ್ಟೊಂದು ನಾಜೂಕಾಗಿ ಸೃಷ್ಟಿಸಿದ್ದಾನೋ! ಜಗತ್ತಿನ ಪ್ರತಿಯೊಂದು ದೃಶ್ಯವನ್ನೂ ಗಮನಿಸುತ್ತ, ಸುತ್ತ ಬದಲಾಗುತ್ತಿರುವ ನಾನಾ ಪ್ರಾಕೃತಿಕ ಚಲನೆಗಳೆಲ್ಲ ಗಣನೆಗೆ ತಂದುಕೊಳ್ಳುತ್ತ, ಮಗು ಅಸಾಧಾರಣ ರೀತಿಯಲ್ಲಿ ತನ್ನ ಅರಿವನ್ನು ವಿಸ್ತರಿಸುತ್ತ ಹೋಗುತ್ತದೆ. ಖಾಲಿ ಮನಸ್ಸಿನೊಂದಿಗೆ ಈ ಪ್ರಪಂಚಕ್ಕೆ ಕಾಲಿಡುವ ಮಗು, ತನ್ನ ತಾಯಿಯನ್ನು ಗುರುತಿಸುತ್ತದೆ; ಅವಳ ಧ್ವನಿ, ಹಾವಭಾವ, ಮಾತುಕತೆ, ಪ್ರೀತಿ ಎಲ್ಲವನ್ನೂ ಅರಿತುಕೊಳ್ಳುತ್ತದೆ, ಮನೆಯಲ್ಲಿ ಉಳಿದ ವ್ಯಕ್ತಿಗಳನ್ನೂ ಪರಿಚಯ ಮಾಡಿಕೊಳ್ಳುತ್ತದೆ. ಇಂದ್ರಿಯಗಳಿಂದ ಜಗತ್ತಿನ, ವ್ಯಕ್ತಿಗಳ ಹಾಗೂ ವಸ್ತುಗಳ ಪರಿಚಯವಾದರೆ, ನೆನಪೆಂಬ ಮನಸ್ಸಿನ ಇನ್ನೊಂದು ಕ್ರಿಯೆದಿಂದ ಅಸಾಧಾರಣ ಸಂಗತಿಗಳು ಜರಗುತ್ತವೆ. ಮಗುವಿನ ಮನಸ್ಸೊಂದು ಬೃಹತ್ತಾದ ಗ್ರಂಥಾಲಯದಂತೆ: ಶಬ್ದಗಳ ಸಂಗ್ರಹ ಹೆಚ್ಚುತ್ತಲೇ ಹೋಗುತ್ತದೆ. ಭಾಷೆಯ ಮೂಲಕ ಕ್ರಮಬದ್ಧವಾಗಿ ಎಲ್ಲವನ್ನೂ ಅರಿತುಕೊಳ್ಳುವ ಬಗೆ ಅದಕ್ಕೆ ಕರಗತವಾಗುತ್ತದೆ. ಹೀಗೆ ಗ್ರಹಿಕೆ, ನೆನಪು, ಭಾಷೆ – ಇವು ಮುಪ್ಪುರಿಗೊಂಡು, ಮಾನವನು ಶೈಶವದಿಂದಲೇ ಅರಿವೆಂಬ ಅದ್ಭುತ ಕ್ರಿಯೆಯಿಂದ ತನ್ನ ವಿಕಸನವನ್ನು ಅತಿವೇಗವಾಗಿ ಮಾಡಿಕೊಳ್ಳುತ್ತ ಹೋಗುತ್ತಾನೆ. ಇವೆಲ್ಲವೂ ಅವನಿಗೆ ಅರಿವಿಲ್ಲದೆಯೇ ನಡೆಯುವುದು ಸೃಷ್ಟಿಯ ಅಚ್ಚರಿಯೆನ್ನಬೇಕು.

## ಮಾತೆಂಬ ಮಾಧ್ಯಮ

ಧ್ವನಿಯನ್ನು ಸಂಕೇತವಾಗಿ ಬಳಸಿಕೊಳ್ಳುವ ವಿಧಾನ ಕೇವಲ ಮಾನವನಿಗೆ ಸೀಮಿತವಲ್ಲ. ಪ್ರಾಣಿ, ಪಕ್ಷಿಗಳಲ್ಲಿ ಹಲವು ಬಗೆಯ ಧ್ವನಿಗಳು ಹಲವು ಅರ್ಥಗಳನ್ನು ದಾಟಿಸುವ ಮಾಧ್ಯಮವಾಗಿ ಬಳಕೆಯಾಗುತ್ತಿರುವುದು ಸರ್ವವಿದಿತವಾಗಿದೆ. ಆದರೆ ವಿವಿಧ ಬಗೆಯ ಧ್ವನಿಗಳನ್ನು ಒಂದು ಕ್ರಮಬದ್ಧವಾದ ರೀತಿಯಲ್ಲಿ ಉಚ್ಚರಿಸಿ, ಪದಗಳ ಮೂಲಕ, ವಾಕ್ಯಗಳ ಮೂಲಕ ಸ್ಪಷ್ಟವಾಗಿ ಹಾಗೂ ಖಚಿತವಾಗಿ ತನ್ನ ಭಾವನೆಗಳನ್ನು ತಿಳಿಸುವ ಭಾಷಾಮಾಧ್ಯಮ ಮಾನವನ ಬೌದ್ಧಿಕ ಮೇಲ್ಮೆಯಿಂದಲೇ ಉಂಟಾದುದು; ಮಾನವನ ಸಮಾಜವು ಒಟ್ಟು ಪ್ರಯತ್ನದಿಂದ ಸುದೀರ್ಘ ಕಾಲಾವಧಿಯಲ್ಲಿ ಸೃಷ್ಟಿ ಮಾಡಿದುದು. ಇದರಿಂದ ಜನರ ನಡುವಿನ ವ್ಯವಹಾರಕ್ಕೂ, ಅವರ ಒಟ್ಟು ತಿಳುವಳಿಕೆಗೂ ಒಂದು ಹೊಸ ವೇಗ ದೊರಕಿತು; ಮಾನವನ ಬೌದ್ಧಿಕ ವಿಕಾಸ ಇನ್ನಷ್ಟು ವಿಸ್ತಾರ ಹೊಂದಿತು. ಜ್ಞಾನದ ಅಗಾಧತೆ, ವಿಸ್ತಾರ ತನ್ನ ಮಿದುಳಿನ ಮಿತಿಯನ್ನೂ ಮೀರಿದುದು, ನೆನಪಿನಿಂದಲೇ ಎಲ್ಲ ಜ್ಞಾನವನ್ನೂ ಹಿಡಿದಿಡಲಾಗದು – ಎಂಬ ಅರಿವು ಮೂಡಿದೊಡನೆ ಮನುಷ್ಯ ಅದಕ್ಕೂ ಒಂದು ಪರಿಹಾರ ಕಂಡುಕೊಂಡ. ಧ್ವನಿಸಂಕೇತಗಳಿಗೆ ಪ್ರತಿರೂಪವಾಗಿ ಲಿಪಿಗಳನ್ನು ರೂಪಿಸಿಕೊಂಡ; ಬರವಣಿಗೆ ಎಂಬ ಪದ್ಧತಿ ಪ್ರಚಲಿತವಾಯಿತು. ಇದರಿಂದ ಜ್ಞಾನ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂತು; ಜ್ಞಾನಮಾನವಜನಾಂಗದಲ್ಲಿ ಶಾಶ್ವತವಾಗಿ ಉಳಿಯುವಂತಾಯಿತು. ಈಚೆಗೆ ಗಣಕೀಕರಣದಿಂದ ಜ್ಞಾನದ ಮಾಧ್ಯಮಗಳನ್ನು ಉಳಿಸುವ ಹಲವು ವಿಧಾನಗಳು ಬಳಕೆಗೆ ಬರುತ್ತಿವೆ. ಡಿಜಿಟಲ್ ಲೈಬ್ರರಿ, ಅಂತರ್ಜಾಲದ ಮಾಹಿತಿ ವಿನಿಮಯ, ಮುಗಿಲ ಭಂಡಾರ (ಕ್ಲೌಡ್ ಸ್ಟೋರೇಜ್) – ಹೀಗೆ ನಾನಾರೂಪಗಳನ್ನು ಇದು ಪಡೆದುಕೊಂಡರೂ, ಅವೆಲ್ಲ ಮಾತೆಂಬ ಮಾಧ್ಯಮವನ್ನೇ ಜ್ಞಾನಪ್ರಕ್ರಿಯೆಗಾಗಿ ಅವಲಂಬಿಸಿವೆ ಎಂಬುದನ್ನು ಮರೆಯುವಂತಿಲ್ಲ.

ಜ್ಞಾನವನ್ನು ನೀಡುವ, ಜ್ಞಾನವನ್ನು ಬೆಳೆಸುವ ಹಾಗೂ ಜ್ಞಾನವನ್ನು ಉಳಿಸುವ ಈ ಭಾಷಾಮಾಧ್ಯಮವನ್ನು ಸಂಕೇತಿಸುವ ಲಿಪಿಯನ್ನು ನಮ್ಮಲ್ಲಿ **ಅಕ್ಷರ** ಎಂದು ಕರೆಯಲಾಗಿದೆ. ಎಂಥ ಅದ್ಭುತವಾದ ಹೆಸರಿದು! **ಅಕ್ಷರ**ವೆಂದರೆ 'ಅಳಿವಿಲ್ಲದ್ದು' ಎಂದರ್ಥ. ಜ್ಞಾನವೆಂದರೆ ಅಳಿವಿಲ್ಲದ್ದು. ಇಲ್ಲಿ, 'ಕಲಿತದ್ದನ್ನು ಮರೆಯುವುದಿಲ್ಲವೇ? ಅಥವಾ, ಅರಿವೆಲ್ಲವನ್ನೂ ಹೊಂದಿದ ಒಬ್ಬ ವ್ಯಕ್ತಿ ಸತ್ತನೆಂದರೆ, ಅವನ ಅರಿವೂ ಅಳಿಯಿತಲ್ಲ?' ಎಂಬ ಪ್ರಶ್ನೆ ಮೂಡಬಹುದು. ಆದರೆ ನಮ್ಮ ಪೂರ್ವಿಕರು ಭಾಷಾಮಾಧ್ಯಮದ ಅಸಾಧಾರಣ ಶಕ್ತಿಯನ್ನು ಅರಿತಿದ್ದರು. **ಅಕ್ಷರ**ವೆಂದರೆ ಕೇವಲ ಲಿಪಿ, ಅಥವಾ ಭಾಷೆ ಎಂದಷ್ಟೇ ಅರ್ಥವಲ್ಲ. ಸಾಂಕೇತಿಕವಾಗಿ ಅದು ಲಿಪಿ, ಪದ, ಭಾಷೆ – ಇವಿಷ್ಟನ್ನು ಸೂಚಿಸಬಹುದಾದರೂ, ಇವುಗಳ ಮೂಲಕ ಪಡೆಯುವ ಜ್ಞಾನಕ್ಕೂ ಅದು ಸಂಕೇತವಾಗಿದೆ; ಹಾಗೆ ಪಡೆದ ಎಲ್ಲ ಜ್ಞಾನಗಳ ಶಿಖರವಾದ ಬ್ರಹ್ಮಜ್ಞಾನಕ್ಕೂ ಸಂಕೇತವಾಗಿದೆ. ಅಂತಹ ಇಂದ್ರಿಯಾತೀತ ಜ್ಞಾನದಿಂದ ಯಾವುದನ್ನೂ ಹೊಂದಬಲ್ಲೆವೋ ಅದೇ **'ಅಕ್ಷರ'**. **(ಪರಾ ಯಯಾ ಯದಕ್ಷರಮಧಿಗಮ್ಯತೇ** – *ಮುಂಡಕ, ೧.೧.೫)* ಲಿಪಿಯನ್ನೂ ಅಕ್ಷರವೆಂದು ಕರೆದರು; ಅದರಿಂದ ಆರಂಭಿಸಿ, ಎಲ್ಲ ಜ್ಞಾನಗಳನ್ನೂ ಹಂತಹಂತವಾಗಿ ಗಳಿಸಿ, ಕೊನೆಗೆ ಎಲ್ಲ ಜ್ಞಾನಗಳ ಅಂತಿಮ ಗುರಿಯಾದ, ಅಗಾಧ ಸಮುದ್ರದಂತೆ ಅಸೀಮ ವಿಸ್ತಾರವಾದ ಆತ್ಮಜ್ಞಾನವನ್ನೂ ಅಂಥ ಜ್ಞಾನದಲ್ಲಿ ಒಂದಾಗಿರುವ ಆತ್ಮವಸ್ತುವನ್ನೂ **ಅಕ್ಷರ**ವೆಂದೇ ಕರೆದರು. ಅಂಥ ಅಳಿವಿಲ್ಲದ ನೆಲೆಯನ್ನು ಅರಿಯುವುದೆಂದರೆ, ಅದರಲ್ಲಿ ಒಂದಾ

ಗುವುದೆಂದೇ ಅರ್ಥ; ಅದು ಜ್ಞಾನವೂ ಹೌದು, ಒಂದು ಅಸಾಧಾರಣ ಅನುಭವವೂ ಹೌದು. ಆದ್ದರಿಂದ ಈ ಜ್ಞಾನವನ್ನು ಹೊಂದಿದವನು ಜನನ ಮರಣಗಳಿಲ್ಲದ, ಕ್ಷಯ ವೃದ್ಧಿಗಳಿಲ್ಲದ, ಚಲನೆಯಿಲ್ಲದ ಶಾಶ್ವತ ಸ್ಥಿತಿಯನ್ನು ಪಡೆಯುತ್ತಾನೆ ಎನ್ನುತ್ತವೆ ನಮ್ಮ ಶಾಸ್ತ್ರಗ್ರಂಥಗಳು. ಸಾಕ್ಷಾತ್ಕಾರ ಹೊಂದಿದ ಮಹಾತ್ಮರು ಈ ಮಾತನ್ನು ದೃಢೀಕರಿಸುತ್ತಾರೆ. ಈ ಅರ್ಥದಲ್ಲಿ ಅರಿವಿಗೆ ಮೂಲವಾದ ವರ್ಣಕ್ಕೆ '**ಅಕ್ಷರ**'ವೆಂದು ಕರೆದಿದ್ದು ಅತ್ಯಂತ ಸೂಕ್ತವಾಗಿದೆ. ಜ್ಞಾನದ ಹಿರಿಮೆಯನ್ನು ಸರಿಯಾಗಿ ಅರಿತು, ಅದಕ್ಕೆ ಸೂಕ್ತವಾದ ಉನ್ನತ ಸ್ಥಾನವನ್ನು ನೀಡಿದ್ದಾರೆ ನಮ್ಮ ಪ್ರಾಚೀನ ವಿದ್ವಾಂಸರುಗಳು.

## ಜ್ಞಾನ ಮತ್ತು ಅಜ್ಞಾನ

ಕತ್ತಲೆ ಗಾಢವಾಗಿದ್ದಾಗ ಬೆಳಕಿನ ಮಹತ್ವ ಹೆಚ್ಚುವಂತೆ, ಕಡುಬಣ್ಣದ ಹಿನ್ನೆಲೆಯಲ್ಲಿ ತಿಳುಬಣ್ಣ ವಿಜೃಂಭಿಸುವಂತೆ, ಅಜ್ಞಾನದ ಅಂಧಕಾರ ದಲ್ಲಿ ಜ್ಞಾನದ ಮಹಿಮೆ ಹೆಚ್ಚುವುದು ಸಹಜವಾಗಿದೆ. ಇದನ್ನು ನಮ್ಮ ನಮ್ಮ ದೈನಂದಿನ ಸಾಮಾನ್ಯ ಅನುಭವಗಳಿಂದಲೇ ಕಂಡು ಕೊಳ್ಳುವುದು ಸಾಧ್ಯ; ಯಾವುದೋ ಒಂದು ಪದದ ಅರ್ಥ ಗೊತ್ತಿ ಲ್ಲದೆ ಒದ್ದಾಡುತ್ತೇವೆ. ಕೊನೆಗೊಮ್ಮೆ ಶಬ್ದಕೋಶದಿಂದಲೋ, ಇತರ ಸಹಾಯದಿಂದಲೋ ಅದರ ಅರ್ಥ ತಿಳಿಯಿತು. ಒಂದೇ ಕ್ಷಣ – ಅಲ್ಲಿಯವರೆಗೂ ನಮ್ಮನ್ನು ಆವರಿಸಿದ ಅಜ್ಞಾನ ಒಂದೇ ಕ್ಷಣದಲ್ಲಿ ಮರೆಯಾಯಿತು. ಆ ಪದ ಮುಂದೆ ಕಿವಿಗೆ ಬಿದ್ದಾಗಲೆಲ್ಲ ಅದರ ಅರ್ಥ ನಮ್ಮ ನೆನಪಿನಿಂದ ಮೂಡಿ ಬರುತ್ತದೆ. ಈ ಜ್ಞಾನ ಬರುವ ವರೆಗೆ ನಮ್ಮನ್ನು ಆವರಿಸಿದ್ದ ಅಜ್ಞಾನದ ಅವಸ್ಥೆಯೆಂಥದು? ಈ ಕುರಿತು ನಾವು ಆಲೋಚಿಸುವುದೇ ಇಲ್ಲ. ಅದರ ಅರ್ಥ ತಿಳಿಯುವವರೆಗೆ ನಮಗಾಗಿದ್ದ ಕಳವಳ, ತೊಳಲಾಟ, ಒದ್ದಾಟಗಳೆಲ್ಲ ಇದ್ದಕ್ಕಿದ್ದಂತೆ ಎಲ್ಲಿಗೆ ಹೋದವು? ಮಿಂಚಿನಂತೆ ಬೆಳಗಿದ ಜ್ಞಾನಕ್ಕೆ ಅಲ್ಲಿಯವರೆಗಿನ ಅಜ್ಞಾನವನ್ನು ಕ್ಷಣಾರ್ಧದಲ್ಲಿ ಹೋಗಲಾಡಿಸುವ ಅಗಾಧ ಶಕ್ತಿಯಿದೆ. ಶ್ರೀರಾಮಕೃಷ್ಣರು ಬ್ರಹ್ಮಜ್ಞಾನವನ್ನು ಕುರಿತು ಹೇಳುತ್ತಾರೆ, 'ಸಾವಿರಾರು ವರ್ಷಗಳಿಂದ ಕತ್ತಲಲ್ಲೇ ಇದ್ದ ಪ್ರದೇಶಕ್ಕೆ ಒಂದು ದೀಪವನ್ನು ತಂದರೆ, ಕತ್ತಲೆ ತಕ್ಷಣ ಮಾಯವಾಗುವುದೆ, ಸ್ವಲ್ಪ ಸ್ವಲ್ಪವೇ ಮಾಯವಾಗುವುದೆ? ಆ ತಕ್ಷಣವೇ ಕತ್ತಲೆ ಇಲ್ಲದಾಗುವುದಲ್ಲವೆ? ಅದೇ ರೀತಿ, ಬ್ರಹ್ಮಜ್ಞಾನವಾದ ಕೂಡಲೇ ಯುಗ ಯುಗಾಂತರಗಳಿಂದ ಆವರಿಸಿದ್ದ ಅಜ್ಞಾನವೆಲ್ಲ ಮಾಯವಾಗುವುದು.'' ಇಷ್ಟು ಅದ್ಭುತವಾದ ಜ್ಞಾನವನ್ನು ಪವಿತ್ರವೆಂದೂ, ಶ್ರೇಷ್ಠ ವಾದುದೆಂದೂ, ಬೆಳಕಿನಂತೆ ಮಂಗಳಕರವೆಂದೂ ವರ್ಣಿಸಲಾಗಿದೆ. ಆದರೆ ಆಧ್ಯಾತ್ಮಿಕ ಜಗತ್ತಿನಲ್ಲಿ ಜ್ಞಾನವೇ ಅಜ್ಞಾನವೂ ಆಗಬಲ್ಲುದು ಎಂಬ ಸಂಗತಿ ಆಶ್ಚರ್ಯಕರವಲ್ಲವೆ?

ಕೆಟ್ಟ ವಿಷಯಗಳ, ಮಾನವನ ಒಳಿತಿಗೆ ಮಾರಕವಾದ ಜ್ಞಾನದಿಂದ ಹಾನಿಯಿದೆ, ನಿಜ. ಅಂಥ ಜ್ಞಾನವನ್ನು ಅಜ್ಞಾನವೆಂದು ಕರೆಯಬಹುದು. ಆದರೆ ತಾತ್ತ್ವಿಕವಾಗಿ ಎಲ್ಲ ಅರಿವೂ ಶುದ್ಧವೇ ಎಂಬ ಮಾತು ಅಂತಿಮವಾಗಿ ನಿಲ್ಲುತ್ತದೆ. ಜ್ಞಾನವು ನಮ್ಮ ನಮ್ಮ ಉಪಯುಕ್ತತೆಗೆ ಅನುಗುಣವಾಗಿ ಉತ್ತಮವೋ, ಕೆಡುಕೋ ಆಗಬಲ್ಲದು; ಆದರೆ ಕೆಡುಕನ್ನು ತರುವ ಜ್ಞಾನವೂ ಅದರ ದೃಷ್ಟಿಯಲ್ಲಿ ಕೆಡುಕಲ್ಲ, ಅದು ಜ್ಞಾನವಾಗಿ ಶುದ್ಧವೇ. ಉದಾಹರಣೆಗೆ ಪರಮಾಣು ಬಾಂಬ್. ಅದರ ಬಳಕೆ ಕೆಟ್ಟದು; ಲಕ್ಷಾಂತರ ಮಂದಿಯನ್ನು ಬಲಿ ತೆಗೆದುಕೊಳ್ಳುವಂತಹದು. ಆದರೆ ಅದರ ಹಿಂದಿನ ತತ್ತ್ವ, ಅದರ ತಂತ್ರಜ್ಞಾನ ಇವರಲ್ಲ ಜ್ಞಾನವಾಗಿ ಪರಿಶುದ್ಧವೆ. '**ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ**' ಎನ್ನುವ ಗೀತೆಯ ಮಾತು ಇಷ್ಟೊಂದು ವಿಶಾಲ ಅರ್ಥವನ್ನು ಹೊಂದಿದೆ.

ಆದರೆ, ಜ್ಞಾನ ಹೆಚ್ಚಿದಷ್ಟೂ ಅಜ್ಞಾನ ಹೆಚ್ಚುವುದೆಂಬ ವಾದವೊಂದಿದೆ. ಅದರ ಆಶಯ ಹೀಗಿದೆ: ಎಲ್ಲ ಜ್ಞಾನವೂ ಒಂದಲ್ಲ ಒಂದು ರೀತಿಯ ವರ್ಗೀಕರಣ. 'ಮರ'ವೆಂದರೆ ಕಲ್ಲು ಅಲ್ಲವೆಂದರ್ಥ. ಇದು ಒಂದು ವಸ್ತುವಿನಿಂದ ಇನ್ನೊಂದನ್ನು ಪ್ರತ್ಯೇಕಿಸುತ್ತದೆ. ಈ 'ಪ್ರತ್ಯೇಕಿಸು'ವುದೇ ವರ್ಗೀಕರಣ. ನಮ್ಮ ಜ್ಞಾನವೆಲ್ಲವೂ ಇಂಥ ವರ್ಗೀಕರಣಗಳಿಂದಲೇ ಆಗಿದೆ. ಹೆಚ್ಚು ಹೆಚ್ಚು ವಿಷಯಗಳನ್ನು ಅರಿತಂತೆಲ್ಲ ಹೆಚ್ಚು ಸಂಗತಿಗಳು ನಮ್ಮ ಜ್ಞಾನ ಭಂಡಾರಕ್ಕೆ ಸೇರ್ಪಡೆಯಾಗುತ್ತವೆ. ಈ ದೃಷ್ಟಿಯಲ್ಲಿ ಹೆಚ್ಚು ಜ್ಞಾನವನ್ನು ಹೊಂದಿರುವವ ಮನಸ್ಸಿನಲ್ಲಿ ಅಷ್ಟಷ್ಟೂ ವರ್ಗೀಕರಣ ಹೆಚ್ಚುತ್ತದೆ. ಆದರೆ ವರ್ಗೀಕರಣ ಹೆಚ್ಚಿದಷ್ಟೂ, ವಿಶ್ಲೇಷಣಾತ್ಮಕವಾದ ಹಾಗೂ ಸುವ್ಯವಸ್ಥಿತವಾದ ಸೂಕ್ಷ್ಮಬುದ್ಧಿ ಹೆಚ್ಚುವುದಲ್ಲದೆ, ಅದರಿಂದ ಜ್ಞಾನ ಹೆಚ್ಚುವುದು ಎನ್ನಲಾಗದು. ಎಲ್ಲ ಜ್ಞಾನದ ಮೂಲವಾದ ಏಕತೆಯ ಜ್ಞಾನವುಂಟಾಗಲು ಈ ಎಲ್ಲ ವರ್ಗೀಕರಣಗಳನ್ನು ಅಳಿಸಿಹಾಕಬೇಕು. ಅಸಂಖ್ಯಾತ ಶಬ್ದಗಳ ಪ್ರಪಂಚದಲ್ಲಿ ನಮ್ಮ ಮೂಲ ಸ್ವರೂಪವನ್ನು ನಾವು ಕಳೆದುಕೊಂಡು, ನಮ್ಮ ಆತ್ಮದಿಂದ ದೂರವಾಗುತ್ತಿದ್ದೇವೆ; ಆದ್ದರಿಂದ ಮತ್ತೆ ನಮ್ಮ ಅಂತರಾತ್ಮನನ್ನು ಹೊಂದುವ ಮಾರ್ಗವೆಂದರೆ ಈ ನಾನಾ ಬಗೆಯ ಶಬ್ದಗಳನ್ನು ನಿರಂತರ ಉಲಿಯುತ್ತಿರುವ ಮನಸ್ಸನ್ನು ಒಂದೇ ಯೋಚನೆ ಮಾಡುವಂತೆ, ಆತ್ಮವಸ್ತುವಿನಲ್ಲಿಯೇ ನೆಲೆಸುವಂತೆ ಮಾಡುವುದು. ಏಕಾಗ್ರತೆ, ಧ್ಯಾನ, ಧಾರಣೆ – ಇವೆಲ್ಲ ಈ ಸಾಧನೆಯ ವಿವಿಧ ಹಂತಗಳು. ಜಪಸಾಧನೆ, ಪ್ರಾರ್ಥನೆ, ಧ್ಯಾನಗಳ ಮೂಲಕ ಮನಸ್ಸು ಒಂದೇ ವಸ್ತುವಿನಲ್ಲಿ ನೆಲೆನಿಂತಾಗ ಮನಸ್ಸಿನಲ್ಲಿ ಎಲ್ಲ ಆಲೋಚನೆಗಳೂ ನಿಂತುಹೋಗಿ, ಆತ್ಮದರ್ಶನವಾಗುವುದು. ಆಗಲೇ ನಿಜವಾದ ಜ್ಞಾನ ಲಭಿಸುವುದು. ವೇದಾಂತ ಬೋಧಿಸುವ ತತ್ತ್ವವಿದು.

ಈ ಸಾಧನೆಯ ಮಾರ್ಗದಲ್ಲಿ 'ಜ್ಞಾನ'ವೆಂದು ಕರೆಯಲ್ಪಟ್ಟ ಭಾಷೆ, ಶಬ್ದ, ಆಲೋಚನೆ ಇವುಗಳು ನಿಜವಾಗಿ ಅಜ್ಞಾನ; ನಮ್ಮ ನೈಜ ಸ್ವರೂಪವಾದ ಆತ್ಮನನ್ನು ಮರೆಮಾಚುವ 'ವರ್ಗೀಕರಣ.' ಹೀಗೆ ಆಧ್ಯಾತ್ಮಿಕ ಅರ್ಥದಲ್ಲಿ ಜ್ಞಾನವೇ ಅಜ್ಞಾನವೆಂದು ಹೇಳುವ ವಾದವೂ ಇದೆ. ನಿಜವಾದ ವಿದ್ಯೆಯೆಂದರೆ ಆತ್ಮಜ್ಞಾನವೊಂದೇ; ಉಳಿದವೆಲ್ಲ ಅವಿದ್ಯೆಯೆಂದು ಉಪನಿಷತ್ತು ಹೇಳುವುದು ಈ ಅರ್ಥದಲ್ಲೇ.

## ಅರಿವಿನ ಮೂಲದತ್ತ

ಅರಿವಿನ ಮೂಲವೆಲ್ಲಿ? ಕತ್ತಲೆಯ ಕೋಣೆಗೆ ಬೆಳಕು ಬಂದಂತೆ, ಜ್ಞಾನವು ಹೊರಗಿನಿಂದ ಬಂತೆ? ನಮ್ಮನ್ನು ಕವಿದಿದ್ದ ಅಜ್ಞಾನ ತೊಲಗಲು ಜ್ಞಾನ ಬರಬೇಕು. 'ಬರಬೇಕು' ಎನ್ನುತ್ತೇವೆ – ಹೀಗೆ